
ಸಂದರ್ಶಕ ಎಂ.ಜಿ. ಹೆಗಡೆ ಮತ್ತು ಕತೆಗಾರ ಶ್ರೀಧರ ಬಳಗಾರ

ಮರುವ್ಯಾಖ್ಯಾನಕ್ಕೆ ಒಳಪಡಿಸುವಂತೆ ಒತ್ತಾಯಿಸುತ್ತದೆ. ನಿರೂಪಿತ ಪಾತ್ರಗಳಂತೆ ಸ್ವತಃ ನಿರೂಪಕರೂ ಸಹಿತ ಯಾವು ಯಾವುದೋ ಒತ್ತಡ, ಒತ್ತಾಸೆಗಳಿಗೆ ಒಳಗಾಗಿದ್ದಾರೆ ಎನ್ನುವುದರ ಕಡೆಗೂ ಅದು ಲಕ್ಷ್ಯ ಸೆಳೆಯುತ್ತದೆ. ಹೀಗಾಗಿ ಅನೇಕ ಸಲ ಇವರ ನಿರೂಪಣೆ ಎಷ್ಟು ವಿಶ್ವಸನೀಯ ಎನ್ನುವ ಪ್ರಶ್ನೆ ಕೂಡ ಹುಟ್ಟಿಕೊಳ್ಳುತ್ತದೆ. ಅಂದರೆ, ಇದು ಚರಿತ್ರೆಯ ರಚನೆಯ ತೊಡಕಿನ ಕುರಿತ ಕಾದಂಬರಿ ಕೂಡ. ಇದು ಒಂದು ರೀತಿಯಲ್ಲಿ ಮೃಗಶಿರ ಅಂದ್ರೆ ಜಿಂಕೆ ಆಕೃತಿಯ ನಕ್ಷತ್ರ ಅಂತ ನಾವು ಅಂದುಕೊಂಡ ಹಾಗೆ. ಅಂದ್ಕೊಂಡಿದ್ದು ಸುಳ್ಳಲ್ಲ, ಅದರ ನಿಜ ಯಾರಿಗೆ ಗೊತ್ತು?

ವಿವಾದಗ್ರಸ್ತ ಇತಿಹಾಸ ಕಲ್ಪನೆಯ ಮರು ವ್ಯಾಖ್ಯಾನಕ್ಕೆ 'ಮೃಗಶಿರ' ಒತ್ತಾಯಿಸುತ್ತದೆ ಎಂಬ ನಿಮ್ಮ ಮಾತನ್ನು ನಾನು ಒಪ್ಪುತ್ತೇನೆ. ಇತಿಹಾಸ ಗತ ಕಾಲದ ವಸ್ತುನಿಷ್ಠ ದಾಖಲೆ ಎಂಬ ಹೇಳಿಕೆ ಈಗ ಹಾಸ್ಯಾಸ್ಪದವಾಗಿ ಕಾಣುತ್ತದೆ. ವ್ಯಕ್ತಿಗತ ಭಾವಾವೇಶಗಳೂ ಇತಿಹಾಸಕಾರ ನಿಂತ ವರ್ತಮಾನ ಕಾಲವೂ ಗತದ ಗ್ರಹಿಕೆಯನ್ನು ವೈಜ್ಞಾನಿಕ ಸಾಕ್ಷ್ಯಾಧಾರಗಳ ನೆಲೆಗಳ ವ್ಯಾಖ್ಯಾನಗಳನ್ನು ನಿಯಂತ್ರಿಸುವುದಿಲ್ಲವೆ? ಇತಿಹಾಸ ಯಾವತ್ತೂ ಸ್ಮೃತಿ ರಾಜಕಾರಣವೇ. ಆಯ್ದ ದಾಖಲೆಗಳು, ಅವುಗಳ ವ್ಯಾಖ್ಯಾನಗಳು ಪ್ರಭುತ್ವದ ಲಿಖಿತ ಇತಿಹಾಸ ಅಧಿಕೃತವೂ ಶ್ರೇಷ್ಠವೂ ಎಂದು ನಂಬಿಸಿದ್ದು ಮಾತ್ರವಲ್ಲದೆ, ಅದು ಶ್ರೇಷ್ಠ ನಾಗರಿಕತೆಗೆ ಮಾನದಂಡವಾಗಿ ಪರಿಗಣಿಸಲ್ಪಟ್ಟಿದೆ; ಲಿಖಿತ ಇತಿಹಾಸದಿಂದ ಹೊರಗಿದ್ದವರನ್ನು ಅನಾಗರಿಕರನ್ನಾಗಿಯೇ ಚಿತ್ರಿಸಿದ್ದಾರೆ; ಅಧೀನರ ಇತಿಹಾಸ